# ಉತ್ತರ ಕನ್ನಡ ಜಿಲ್ಲಾ ಪೊಲೀಸ್

## ಪತ್ರಿಕಾ ಪ್ರಕಟಣೆ ದಿನಾಂಕ : 18-10-2020

ದಿನಾಂಕ:21-10-1959 ರಂದು ಶ್ರೀ ಕರಣ್ ಸಿಂಗ್ ಡಿ.ವೈ.ಎಸ್.ಪಿ, ಸಿ.ಆರ್.ಪಿ.ಎಫ್ ಇವರ ಮುಖಂಡತ್ವದಲ್ಲಿ ಒಂದು ಪೊಲೀಸ್ ದಳ ಹಾಟ್‌ಸ್ಟ್ರೀಂಗ್ ಪೋಸ್ಟದ ಹತ್ತಿರ ಪಹರೆ ಮಾಡುತ್ತಿದ್ದಾಗ ಹಲವಾರು ಚೀನಾ ಸೈನಿಕರು ಹಠಾತ್ ದಾಳಿ ಮಾಡಿದ್ದು ಅವರು ನಮ್ಮ ಪೊಲೀಸ್ ದಳದವರಿಗಿಂತಲೂ ಹೆಚ್ಚಿಗೆ ಇದ್ದುದಲ್ಲದೆ ಮೇಲ್ಮಟ್ಟದ ಶಸ್ತ್ರಾಸ್ತ್ರಗಳನ್ನು ಹೊಂದಿದರು. ನಮ್ಮ ಸಿಆರ್‌ಪಿಎಫ್ ಪೊಲೀಸರು ತಮ್ಮ ಹತ್ತಿರ ಇದ್ದತಂಹ ಕೇವಲ ರೈಫಲ್‌ಗಳಿಂದ ಮಾತ್ರ ಕೊನೆಯ ರಕ್ತದ ಹನಿ ಮತ್ತು ಕೊನೆಯ ಉಸಿರು ಇರುವವರೆಗೆ ಧೈರ್ಯ, ಶೌರ್ಯದಿಂದ ಹೋರಾಡುತ್ತಾ 10 ಜನ ಪೊಲೀಸರು ವೀರ ಸ್ವರ್ಗವನ್ನು ಪಡೆದರು ಹಾಗೂ 09 ಜನ ಪೊಲೀಸರು ಚೀನಾ ಸೈನಿಕರ ವಶವಾಗಿದ್ದರು. ಇದರಲ್ಲಿ ಮಡಿದವರಿಗೆ ಇಡೀ ದೇಶವು ಶ್ರದ್ಧಾಂಜಲಿಯನ್ನು ಅರ್ಪಿಸಿ ಅವರ ಧೈರ್ಯ, ಶೌರ್ಯವನ್ನು ಕೊಂಡಾಡಿತು. ದೇಶಕ್ಕಾಗಿ ಹೋರಾಡುತ್ತಾ ವೀರಸ್ವರ್ಗವನ್ನು ಪಡೆದ ಈ ಶೂರರ ಸ್ಮರಣಾರ್ಥವಾಗಿ ಸ್ಮಾರಕವನ್ನು ಲಡಾಖ್‌ನ ಅಬಾಸಿಚಿನ್ ಭಾಗದಲ್ಲಿ 16000 ಅಡಿ ಎತ್ತರದ ಮೇಲೆ ನಿಲ್ಲಿಸಲಾಗಿದೆ. ಪ್ರತಿ ವರ್ಷ ಅಕ್ಟೋಬರ 21 ರಂದು 16000 ಅಡಿ ಎತ್ತರದಲ್ಲಿರುವ ಸ್ಮಾರಕಕ್ಕೆ ತೆರಳಿ ಗೌರವ ಸಲ್ಲಿಸುತ್ತಿದ್ದು ಅಂದಿನಿಂದ ಪೊಲೀಸ್ ಹುತಾತ್ಮರ ದಿನಾಚರಣೆ ಆಚರಿಸುತ್ತಾ ಬರಲಾಗಿದೆ

ಈ ಹುತಾತ್ಮರ ಸ್ಮರಣಾರ್ಥವಾಗಿ ಜಿಲ್ಲಾ ಸಶಸ್ತ್ರ ಮೀಸಲು ಪಡೆ ಬ್ಯಾಂಡ್ ಸಿಬ್ಬಂದಿಯವರಿಂದ ದಿನಾಂಕ: 21-10-2020 ರಂದು ಸಾಯಂಕಾಲ 05.30 ಗಂಟೆಗೆ ಕಾರವಾರದ ಮಯೂರ ವರ್ಮ ಕಡಲ ತೀರದಲ್ಲಿ **"ಬ್ಯಾಂಡ್ ಶೋ ಪ್ರದರ್ಶನ"** ಏರ್ಪಡಿಸಲಾಗಿದೆ. ಸದರಿ ದಿನದಂದು ಸಾರ್ವಜನಿಕರು ಬಂದು ಬ್ಯಾಂಡ್ ಶೋ ವೀಕ್ಷಿಸಿ ಪೊಲೀಸ್ ಹುತಾತ್ಮರಿಗೆ ಶ್ರದ್ಧಾಂಜಲಿ ಸಲ್ಲಿಸಬಹುದಾಗಿದೆ.

**ಸಾರ್ವಜನಿಕ ಸಂಪರ್ಕಾಧಿಕಾರಿ,**
**ಜಿಲ್ಲಾ ಪೊಲೀಸ್ ಕಛೇರಿ, ಕಾರವಾರ.**